O.S. No.78/2018 P.W. 2 Dated :25-06-2024.

ಸಾಕ್ಷಿಗೆ ಪ್ರಮಾಣವಚನ ಬೋಧಿಸಲಾಯಿತು.

ಪಾಟೀಸವಾಲುಃ -ಶ್ರೀ. ಕೆ.ಎನ್. ವಕೀಲರಿಂದ.

ನನ್ನ ಅಜ್ಜನ ಹೆಸರು ಗಿಡ್ಡಯ್ಯ . ಗಿಡ್ಡಯ್ಯನ ತಂದೆಯ ಹೆಸರು ತಿರುಮಲಯ್ಯ. ತಿರುಮಲಯ್ಯನ ತಂದೆ ಹೆಸರು ತಿರುಮಲಯ್ಯ ಎಂದರೆ ಸರಿ . ತಿರುಮಲಯ್ಯನಿಗೆ ಗಿಡ್ಡಯ್ಯ ಮತ್ತು ತಿರುಮಲಯ್ಯ ಎಂಬ ಇಬ್ಬರು ಮಕ್ಕಳಿದ್ದರು ಎಂದರೆ ಸರಿ . ಗಿಡ್ಡಯ್ಯನಿಗೆ ದಾಸಯ್ಯ ಎಂಬ ಮಗನಿದ್ದರು ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆಯ ಹೆಸರು ನನಗೆ ಗೊತ್ತಿಲ್ಲ. ದಾವೆಯಲ್ಲಿ ಪ್ರತಿವಾದಿಯ ತಂದೆಯ ಹೆಸರನ್ನು ಏನೆಂದು ನಮೂದಿಸಿರುತ್ತೆ ಎಂದು ನನಗೆ ನೆನಪಿರುವುದಿಲ್ಲ. ದಾಸಯ್ಯನವರಿಗೆ ಡಿ.ರಾಜಪ್ಪ , ಗಿಡ್ಡಮ್ಮ ಮತ್ತು ಮೀನಾಕ್ಷಿ ಎಂಬ ಮಕ್ಕಳಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ. ದಾವಾ ಸ್ವತ್ತುಗಳು ಯಾರ ಹೆಸರಿನಲ್ಲಿ ಮಂಜೂರಾಗಿರುತ್ತವೆ ಎಂದು ನನಗೆ ಗೊತ್ತಿಲ್ಲ. ದಾವಾ ಸ್ವತ್ತಿನ ದಾಖಲೆಗಳು ಗಿಡ್ಡಯ್ಯನ ಹೆಸರಿನಲ್ಲಿರುವ ಬಗ್ಗೆ ನಾನು ಕೈಬರಹದ ಪಹಣಿಗಳನ್ನು ನೋಡಿ ತಿಳಿದುಕೊಂಡಿರುತ್ತೇನೆ. ನನ್ನ ತಂದೆಯವರು 10-12 ವರ್ಷಗಳ ಹಿಂದೆ ಮರಣ ಹೊಂದಿರುತ್ತಾರೆ , ಅವರು ಮರಣ ಹೊಂದಿದ ನಂತರ ದಾವಾ ಸ್ವತ್ತಿನ ದಾಖಲೆಗಳನ್ನು ನೋಡಿರುತ್ತೇನೆ. ದಾವಾ ಸ್ವತ್ತಿನ ಮೂಲ ದಾಖಲೆಗಳನ್ನು ನಾನು ತೆಗೆಸಿ ನೋಡಿರು ವುದಿಲ್ಲ. ಪ್ರತಿವಾದಿಯು ನನ್ನ ವಿರುದ್ಧ ಅ ದಾ 23/2012 ರ ರೀತ್ಯಾ ದಾವೆ ಹೂಡಿರುತ್ತಾರೆ ಎಂದರೆ ಸರಿ . ನಾನೂ ಆ ದಾವೆಯಲ್ಲಿ ಹಾಜರಾಗಿರುತ್ತೇನೆ ಎಂದರೆ ಸರಿ . ಪ್ರತಿವಾದಿಯು ಆ ದಾವೆಯನ್ನು ಹಿಂಪಡೆದುಕೊಂಡಿರುತ್ತಾರೆ ಎಂದರೆ ಸರಿ . ರಾಜಪ್ಪನವರ ವ್ಯವಸಾಯಕ್ಕೆ ತೊಂದರೆ ಕೊಟ್ಟ ಕಾರಣ ಅವರು ನನ್ನ ವಿರುದ್ಧ ಠಾಣೆಯಲ್ಲಿ ದೂರು ದಾಖಲಿಸಿದ್ದರು ಎಂದರೆ ಸರಿಯಲ್ಲ. ದಿಃ15-01-2009 ರಂದು ಠಾಣೆಗೆ ನನ್ನನ್ನು ಕರೆಸಿ ನನಗೆ ಬುದ್ದಿವಾದ ಹೇಳಿದರು ಎಂದರೆ ಸರಿಯಲ್ಲ. ನಾನು ಸದರಿ ದಾವೆ ಹೂಡಿ 3 ವರ್ಷಗಳಾಗಿರುತ್ತದೆ. ನಾನು ದಾವಾ ಸ್ವತ್ತಿನ ಸ್ವಾಧೀನಾನುಭವದಲ್ಲಿರುತ್ತೇನೆ ಎಂದು ದಾವೆ ಹೂಡಿರುತ್ತೇನೆ.

ನಾನು ನಿಗಧಿತ ಅವಧಿಯಲ್ಲಿ ದಾವೆ ಹೂಡದೆ ತಡವಾಗಿ ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಾಯಿಯ ಹೆಸರು ಈರಮ್ಮ ಎಂದರೆ ನನಗೆ ಗೊತ್ತಿಲ್ಲ. ಪ್ರತಿವಾದಿಯ ತಾಯಿ ಬೇಲೂರು ತಾಲ್ಲೂಕು, ಮೂಳೇನಹಳ್ಳಿ ಗ್ರಾಮದವರು ಎಂದರೆ ಸರಿ . ಪ್ರತಿವಾದಿಯ ಕುಟುಂಬದಲ್ಲಿ ವಿಭಾಗವಾಗಿದ್ದು , ವಿಭಾಗದ ಮುಖಾಂತರ ದಾವಾ ಸ್ವತ್ತುಗಳು ಪ್ರತಿವಾದಿಯ ಹಿಸ್ಸೆಗೆ ಬಂದಿರುತ್ತವೆ ಎಂದರೆ ಸರಿಯಲ್ಲ. ಪ್ರತಿವಾದಿಯ ತಂದೆ ಮರಣ ಹೊಂದಿದ ನಂತರ ದಾವಾ ಸ್ವತ್ತಿನ ಪೌತಿ ಖಾತೆ ಪ್ರತಿವಾದಿಯ ಹೆಸರಿಗೆ ವರ್ಗಾವಣೆಯಾಗಿರುತ್ತದೆ ಎಂದರೆ ಸರಿಯಲ್ಲ. ಎಂ ಆರ್ ನಂ 17/95-96 ರ ರೀತ್ಯಾ ದಾವಾ ಸ್ವತ್ತಿನ ಖಾತೆ ಪ್ರತಿವಾದಿಯ ಹೆಸರಿನಲ್ಲಿರುತ್ತದೆ ಎಂದರೆ ಸರಿಯಲ್ಲ. ಎಂ ಆರ್ ನಂಬರ್. 17/95-96 ಅನ್ನು ನಾನು ಕಂದಾಯ ಅಧಿಕಾರಿಗಳ ಬಳಿ ಪ್ರಶ್ನಿಸಿರುವುದಿಲ್ಲ. ಎ ಸಿ ನ್ಯಾಯಾಲಯದಲ್ಲಿ ಎಂ ಆರ್ ಅನ್ನು ಪ್ರಶ್ನಿಸಲು ತೊಂದರೆ ಇತ್ತೇ ಎಂದರೆ ಸಾಕ್ಷಿಯು ಈ ನ್ಯಾಯಾಲಯದಲ್ಲಿ ದಾವೆ ಹೂಡಿರುತ್ತೇನೆ ಎಂದು ನುಡಿಯುತ್ತಾರೆ. ಪ್ರತಿವಾದಿಯ ತಂದೆ ಮರಣ ಹೊಂದಿದ ನಂತರ ಪೌತಿ ಖಾತೆ ಆಧಾರದ ಮೇಲೆ ದಾವಾ ಸ್ವತ್ತಿನಲ್ಲಿ ಪ್ರತಿವಾದಿಯು ಹಕ್ಕು ಮತ್ತು ಸಾಧೀನ ಹೊಂದಿ ಸ್ವಾಧೀನಾನುಭವದಲ್ಲಿರುತ್ತಾರೆ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ಅಜ್ಜ ಸ್ವಾಧೀನದಲ್ಲಿದ್ದ ಬಗ್ಗೆ ದಾಖಲೆಗಳನ್ನು ನಮ್ಮ ವಕೀಲರಿಗೆ ನೀಡಿರುತ್ತೇನೆ. ನನ್ನ ತಂದೆ ಸಣ್ಣಗಿಡ್ಡಯ್ಯ ಮತ್ತು ಅವರ ಮರಣದ ನಂತರ ವಾದಿಯರಾದ ನಾವುಗಳು ದಾವಾ ಸ್ವತ್ತಿನಲ್ಲಿ ಸ್ವಾಧೀನದಲ್ಲಿರುವ ಬಗ್ಗೆ ದಾಖಲೆಗಳನ್ನು ಹಾಜರುಪಡಿಸಿರುವುದಿಲ್ಲ ಎಂದರೆ ಸರಿಯಲ್ಲ. ದಾವಾ ಸ್ವತ್ತಿನಲ್ಲಿ ನನ್ನ ಅಜ್ಜನಾಗಲೀ , ನನ್ನ ತಂದೆಯಾಗಲೀ ಅಥವಾ ನಾನಾಗಲೀ , ನನ್ನ ಕುಟುಂಬದವರಾಗಲೀ ಎಂದಿಗೂ ಸಹಾ ಸ್ವಾಧೀನಾನುಭವದಲ್ಲಿರುವುದಿಲ್ಲ ಎಂದರೆ ಸರಿಯಲ್ಲ. ಸುಳ್ಳು ವ್ಯಾಜ್ಯಕಾರಣ ಸೃಷ್ಟಿ ಮಾಡಿ ಸುಳ್ಳು ದಾವೆ ಹೂಡಿರುತ್ತೇನೆ ಎಂದರೆ ಸರಿಯಲ್ಲ.

ಮರುವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನಕ್ಕೆ ಬೆರಳಚ್ಚು ಮಾಡಿಸಲಾಯಿತು)

ಓ ಹೇ ಕೇ ಸರಿ ಇದೆ

ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.,
ಆಲೂರು.